ಶ್ರೀಮತಿ ಬಿ. ಎಲ್. ನುಬ್ಬಮ್ಮ.—ಬೆಳೆಯಾಗದೆ ಜನರೆಲ್ಲಾ ಹಾಳಾಗಿಹೋಗುತ್ತಿದ್ದಾರೆಂದರೆ ಒಪ್ಪುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಒಪ್ಪುವುದಕ್ಕೆ ಆಗುವುದಿಲ್ಲ.

Allotment to Mysore District for irrigation works.

Q.—484. **Sri U. M. MADAPPA** (Chamarajanagar).—

Will the Government be pleased to state :—

(*a*) the amount allotted to Mysore District for the repairs of irrigation tanks; construction of new channels and desilting (information to be furnished talukwar);

(*b*) the names of taluks in which the work has been executed (the names of tanks to be given);

(*c*) the amount spent in respect of each tank;

(*d*) out of the amount provided by the Government, the amount lapsed to Government without being spent;

(*e*) the reasons for such lapse.

A.—**Sri Kadidal MANJAPPA** (Minister for Revenue and Public Works).—

(*a*) The grants allotted to the Mysore, Nanjangud and Upper Cauvery Divisions are furnished below :—

	Mysore	*Nanjangud*	*Upper Cauvery*
	Rs.	Rs.	Rs.
Restoration of tanks ...	65,000	40,000	50,000
Desilting of tanks ...	25,000	25,000	45,000
Construction or improvements of dams, channels, etc. ...	4,00,000	50,000	3,00,000

(*b*) The works were in execution in all taluks.

(*c*) The collection of particulars of names of tanks and outlay against each takes time, and will be furnished in due course.

(*d*) It is expected that the grants will be worked out fully.

(*e*) Does not arise in view of (*d*) above.

ಶ್ರೀ ಯು ಎಂ. ಮಾದಪ್ಪ.—ಮೊಬಲಗಿನ ಹಂಚಿಕೆಯಲ್ಲಿ ಹೀಗೆ ವ್ಯತ್ಯಾಸ ಏರಲು ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಕಾರಣಗಳೇ ನೆಂಬುದನ್ನು ಮೊದಲಿನಿಂದಲೂ ಹೇಳುತ್ತಲೇ ಬಂದಿದ್ದೇನೆ. ಎಲ್ಲೆಲ್ಲಿ ನೀರಾವರಿ ಯೋಜನೆಗಳನ್ನು ಮೊದಲು ಕೈಕೊಳ್ಳತಕ್ಕ ಅವಶ್ಯಕತೆಯಿದೆಯೋ ಅಲ್ಲಿಗೆ ಮೊದಲು ಹೆಚ್ಚಿನ ಹಣ ಒದಗಿಸಬೇಕಾಗುತ್ತದೆ. ಹಾಗೆ ಒದಗಿಸಿದ್ದಲ್ಲಿ ಅನಂತರ ಉಳಿದುದನ್ನು ಇತರ ಕಡೆಗಳಿಗೆ ಆಯಾ ಪ್ರದೇಶದ ಕೆಲಸ ಕಾರ್ಯಗಳನ್ನು ನೋಡಿ ಹಂಚಲಾಗುತ್ತದೆ.

ಶ್ರೀ ಯು. ಎಂ. ಮಾದಪ್ಪ.—ಈ ಡಿವಿಜನ್ನಿನಲ್ಲಿ ಇತರ ಡಿವಿಜನ್ನುಗಳಿಗಿಂತ ಹೆಚ್ಚಿನ ಕೆಲಸ ಕಾರ್ಯಗಳನ್ನು ಪಡೆದಿರುತ್ತಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲಿನ ಕೆಲಸ ಕಾರ್ಯಗಳನ್ನು ಬೇಗ ಕೈಕೊಳ್ಳಲಾಗುತ್ತದೆ.

ಶ್ರೀ ಯು. ಎಂ. ಮಾದಪ್ಪ.—ಪ್ರತಿಯೊಂದು ತಾಲ್ಲೂಕಿಗೂ ಹಣವನ್ನು ಹಂಚುವುದರಲ್ಲಿ ತಾವು ಯಾವ ನೀತಿ ಅನುಸರಿಸುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಹಂಚುವುದಕ್ಕೆ ಬಹಳ ಕಷ್ಟವಾಗುತ್ತದೆ. ಅಲ್ಲಲ್ಲೇ ಇರತಕ್ಕ ಅವಶ್ಯಕತೆಗಳನ್ನು ನೋಡಿಕೊಂಡು ಹಣವನ್ನೊದಗಿಸಲಾಗುತ್ತದೆ.

ಶ್ರೀ ಯು. ಎಂ. ಮಾದಪ್ಪ.—ಹಾಗೆ ನಂಜನಗೂಡು ಸಬ್‌ಡಿವಿಜನ್ನಿನ ಅವಶ್ಯಕತೆಗಳಿಗೆಲ್ಲಾ ಆಗುವಷ್ಟು ಹಣವನ್ನು ಒದಗಿಸಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲಿನ ಅವಶ್ಯಕತೆಗಳಿಗನುಸಾರವಾಗಿ ಹಣವನ್ನೊದಗಿಸಲಾಗಿದೆ.

ಶ್ರೀ ಯು. ಎಂ. ಮಾದಪ್ಪ.—ಮಳೆಯಾಗದೆ ಯಾವ ಕೆರೆಗಳಿಗೆ ನೀರು ಬರುತ್ತಿಲ್ಲವೋ ಅಂಥ ಕೆರೆಗಳಿಗೆ ಮಣ್ಣು ಸುರಿಯುತ್ತಿರುವುದು ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಯು. ಎಂ. ಮಾದಪ್ಪ.—ಹಾಗೆ ಮಾಡಿದರೆ ದೇಶದ ಹಣ ಹಾಳಾಗುವುದಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಇದು ಊಹಾಪೋಹದ ಪ್ರಶ್ನೆ.

ಶ್ರೀ ಯು. ಎಂ. ಮಾದಪ್ಪ.—ಖರ್ಚಾಗಿರತಕ್ಕ ಮೊಬಲಗನ್ನು ತಿಳಿಸಲು ಇನ್ನು ಎಷ್ಟುಕಾಲ ಹಿಡಿಯುತ್ತದೆ ?

Sri Kadidal MANJAPPA.—As early as possible.

ಶ್ರೀ ಯು. ಎಂ. ಮಾದಪ್ಪ.—ಈ ಅಧಿವೇಶನದ ಅವಧಿಯಲ್ಲೇ ಒದಗಿಸುತ್ತೀರಾ?

Sri KADIDAL MANJAPPA.—I will try.

ಶ್ರೀ ಎಸ್. ಎಚ್. ತಮ್ಮಯ್ಯ.—ಅಪ್ಪರ್ ಕಾವೇರಿ ಡಿವಿಜ್ ಕೃಷ್ಣರಾಜನಗರ ಎಗ್ಸೆಕ್ಯೂಟೀವ್ ಇಂಜಿನಿಯರ್ ಅವರ ಡಿವಿಜನ್ನಿಗೆ ಸೇರಿರುತ್ತದೆಯಲ್ಲವೇ ?

Sri KADIDAL MANJAPPA.—yes.

ಶ್ರೀ ಎಸ್. ಎಚ್. ತಮ್ಮಯ್ಯ.—ಇದನ್ನು ಬೇರೆ ಡಿವಿಜ್ನಿಗೆ ವರ್ಗಾಯಿಸುವ ಆಲೋಚನೆ ಇದೆಯೇ?

Sri KADIDAL MANJAPPA —That does not arise

ಶ್ರೀ ಎಚ್. ಕೆ. ಶಿವರುದ್ರಪ್ಪ.—ಜಿ. ಎಂ. ಎಫ್ ಯೋಜನೆಗಾಗಿ ಮಾನಸಲಾಗಿದ್ದ ಹಣವೆಲ್ಲಾ ಖರ್ಚಾಗಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಈ ವರ್ಷದ ಜೂನ್ ತಿಂಗಳೊಳಗಾಗಿ ಖರ್ಚಾಗಬಹುದು. ಅದಕ್ಕೆ ಪುನಃ ಹಣವನ್ನು ಒದಗಿಸಲಾಗಿದೆ.

ಶ್ರೀ ಶಿವನಂಜೇಗೌಡ.—ಮೈಸೂರು ತಾಲ್ಲೂಕಿನಲ್ಲಿ ಯಾವ ಕಾಂಗಾರಿ ಆಗಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್ ಅಧ್ಯಕ್ಷರು.—ಮೈಸೂರು ಡಿವಿಜ್ ನಹ ಈ ಪ್ರಶ್ನೆಯಲ್ಲಿ ಸೇರಿರುತ್ತದೆ.

ಶ್ರೀ ಕಡಿದಾಳ್ ಮಂಜಪ್ಪ.—ಅವರು ಮೈಸೂರು ತಾಲ್ಲೂಕನ್ನು ಕೇಳಿದರು. ಹೌದು ಮೈಸೂರು ಡಿವಿಜನ್ನಿಗೆ ಮೈಸೂರು ತಾಲ್ಲೂಕು ಸೇರಿರುತ್ತದೆ.

ಶ್ರೀ ಶಿವನಂಜೇಗೌಡ.—ನಾನು ಕೇಳಿದ್ದು ಕಾಂಗಾರಿಯನ್ನು ಸ್ಯಾಂಬಿ ?

(ಉತ್ತರವಿಲ್ಲ.)

———

Terms of grant of land to Backward Class people.

Q—565. **Sri J. NARAYANAPPA** (Chintamani-Scheduled Castes).—

Will the Government be pleased to state :—

(*a*) the terms on which land is being given as per concession rules to Backward Class people ;

(*b*) whether it is possible to show concession in the case of lands given under Grow More Food Scheme to Depressed Class people ?

A.—**Sri Kadidal MANJAPPA** (Minister for Revenue and Public Works).—

(*a*) There are no terms under which lands are granted to Backward Class people.

(*b*) The concession under the Grow More Food Scheme are given to all classes of persons including Depressed Class people and in practice preference is shown to the applicants belonging to the latter over others.

ಶ್ರೀ ಜಿ. ನಾರಾಯಣಪ್ಪ.—ರಿಯಾಯಿತಿ ನಿಬಂಧನೆಗಳ ಮೇಲೆ ಕೊಡಲಾದ ಜಮೀನುಗಳು ಅನೇಕವಾಗಿ ಮಾರಾಟ ಮತ್ತು ಪರಭಾರೆಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿದೆ.

ಶ್ರೀ ಜಿ. ನಾರಾಯಣಪ್ಪ.—ಎಷ್ಟು ವರ್ಷಗಳ ವರೆಗೂ ಹೀಗೆ ಪರಭಾರೆ ಮಾಡಕೂಡದೆಂದು ನೇಮಕ ಮಾಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಪ್ರಾಯಶಃ ಹತ್ತು ವರ್ಷಗಳಿರಬಹುದು.

Sri G. DUGGAPPA.—Will the Government be pleased to state whether there are instances wherein they have taken back lands granted to the Adikarnataka people ?

Sri Kadidal MANJAPPA.—In certain cases where the Adikarnatakas have not complied with the terms of the grant, the appropriate authority has cancelled the grant.

Sri G. DUGGAPPA.—Are the Government aware whether it is not a fact that the Government have taken back the land in Malagal valley which was granted to the Adikarnataka people ?

Sri Kadidal MANJAPPA.—I want notice.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಚಿತ್ರದುರ್ಗ ಜಿಲ್ಲೆಯ ಡಿ. ಸಿ. ಸಾಹೇಬರು ಬಹಳ ಆರ್ಬಿಟ್ರೆರಿಯಾಗಿ ಜಮೀನುಗಳನ್ನು ವಜಾ ಮಾಡುತ್ತಿರುವುದು ಸರ್ಕಾರದ ವರ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಹಾಗೆ ನಡೆದಿರತಕ್ಕ ನಂದರ್ಭಗಳಿದ್ದರೆ, ಅಂತಹವುಗಳನ್ನು ತಮ್ಮ ಗಮನಕ್ಕೆ ತಂದರೆ, ತಾವು ಅವುಗಳನ್ನು ರೀ ಇನ್ಸ್ಪೇಟ್ ಮಾಡುವುದಕ್ಕೆ ಅವಕಾಶ ಕೊಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇದು ಊಹಾಪೋಹದ ಪ್ರಶ್ನೆ.

ಶ್ರೀ ಟಿ. ಹನುಮಯ್ಯ.—ಡಿಪ್ರೆಸ್ಡ್ ಕ್ಲಾಸಿನವರಿಗೆ ಆರ್ಡರ್ ಮಾಡಿದ ಜಮೀನುಗಳ ಬಗ್ಗೆ ಒಂದಾವರ್ತಿ ಆರ್ಡರ್ ಮಾಡಿದ್ದು ನಿಜವೇ ? ಅಥವಾ ಎರಡು ಮೂರಾವರ್ತಿ ಆರ್ಡರ್ ಮಾಡಿದ್ದು ನಿಜವೇ !

ಶ್ರೀ ಕಡಿದಾಳ್ ಮಂಜಪ್ಪ.—ನಿಮ್ಮ ಪ್ರಶ್ನೆ ಅರ್ಥವಾಗುವುದಿಲ್ಲ.

ಶ್ರೀ ಟಿ. ಹನುಮಯ್ಯ.—ಹಿಂದಿನ ಮಂತ್ರಿಮಂಡಲ ಆರ್ಡರ್ ಮಾಡಿದ್ದನ್ನು ಈಗಿನ ಮಂತ್ರಿಮಂಡಲ ಬದ